ಕರ್ನಾಟಕ ಸರ್ಕಾರ

ಸಂಖ್ಯೆ. ಆಇ 324 ರಾಲೆಪ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:23.01.2023.

## ಅಧಿಸೂಚನೆ

ಕರ್ನಾಟಕ ರಾಜ್ಯ ಲೆಕ್ಕಪತ್ರ ಸೇವೆಗಳು (ನೇಮಕಾತಿ) ನಿಯಮಗಳು 2011 ಮತ್ತು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸೇವೆಗಳು (ನೇಮಕಾತಿ)(ತಿದ್ದುಪಡಿ) ನಿಯಮಗಳು 2015 ಗಳನ್ವಯ ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರು/ಉಪ ನಿರ್ದೇಶಕರು ಹುದ್ದೆಗೆ ಉಳಿಕೆ ಮೂಲ ವೃಂದದ 48 ಅಭ್ಯರ್ಥಿಗಳು ಹಾಗೂ ಹೈದ್ರಾಬಾದ-ಕರ್ನಾಟಕ ವೃಂದದ 6 ಅಭ್ಯರ್ಥಿಗಳು ಸೇರಿ ಒಟ್ಟು 54 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ದಿನಾಂಕ 05.08.2022 ರಂದು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಈ ಪೈಕಿ ಸರ್ಕಾರದ ಆದೇಶ ಸಂಖ್ಯೆ:ಆಇ 324 ರಾಲೆಪ 2022, ದಿನಾಂಕ:14.12.2022ರ ಅಧಿಸೂಚನೆಯಲ್ಲಿ ಸಿಂಧುತ್ವ ಮತ್ತು ಪೂರ್ವ ಚಾರಿತ್ರ್ಯ ವರದಿ ಸ್ವೀಕೃತವಾದ ಉಳಿಕೆ ಮೂಲ ವೃಂದದ 34 ಅಭ್ಯರ್ಥಿಗಳಿಗೆ ಹಾಗೂ ಹೈದರಾಬಾದ್ ಕರ್ನಾಟಕ ವೃಂದದ 05 ಅಭ್ಯರ್ಥಿಗಳು ಸೇರಿ ಈ ಕೆಳಕಂಡ ಒಟ್ಟು 39 ಅಭ್ಯರ್ಥಿಗಳ ಶೈಕ್ಷಣಿಕ ದಾಖಲೆ/ಗ್ರಾಮೀಣ ಅಭ್ಯರ್ಥಿ/ವಿಕಲಚೇತನ ಮೀಸಲಾತಿ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸುವ ಷರತ್ತಿಗೊಳಪಟ್ಟು ನೇಮಕಾತಿ ಆದೇಶ ನೀಡಲಾಗಿದೆ.

ಇನ್ನುಳಿದ 15 ಅಭ್ಯರ್ಥಿಗಳ ಪೈಕಿ ಮೂಲ ದಾಖಲಾತಿಗಳನ್ನು ಸಲ್ಲಿಸದೇ ಇರುವ, ವೈದ್ಯಕೀಯ ಪರೀಕ್ಷೆಗೆ ಹಾಜರಾಗದ ಹಾಗೂ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಗುಣ ನಡತೆ ಪೂರ್ವ ಚರಿತ್ರ ವರದಿ ಸ್ವಿಕೃತವಾಗದ 03 ಅಭ್ಯರ್ಥಿಗಳನ್ನು ಹೊರತುಪಡಿಸಿ, ಸಿಂಧುತ್ವ ಮತ್ತು ಪೂರ್ವ ಚಾರಿತ್ರ್ಯ ವರದಿ ಸ್ವೀಕೃತವಾದ ಉಳಿಕೆ ಮೂಲ ವೃಂದದ ಈ ಕೆಳಕಂಡ 12 ಅಭ್ಯರ್ಥಿಗಳ ಶೈಕ್ಷಣಿಕ ದಾಖಲೆ/ಗ್ರಾಮೀಣ ಅಭ್ಯರ್ಥಿ/ವಿಕಲಚೇತನ ಮೀಸಲಾತಿ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸುವ ಷರತ್ತಿಗೊಳಪಟ್ಟು ವೇತನ ಶ್ರೇಣಿ ರೂ.52650-1250-53900-1450-62600-1650-72500-1900-83900-2200-97100/-ರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರು /ಉಪ ನಿರ್ದೇಶಕರು ಹುದ್ದೆಗೆ ಕರ್ನಾಟಕ ನಾಗರಿಕ ಸೇವೆಗಳು (ಪರಿವೀಕ್ಷಣೆ) ನಿಯಮಾವಳಿಗಳು 1977ರ, ನಿಯಮ-3 ರನ್ವಯ 02 ವರ್ಷಗಳ ಪರಿವೀಕ್ಷಣೆಯ ಮೇಲೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೇಮಕ ಮಾಡಲಾಗಿದೆ:-

| ಕ್ರ. ಸಂ. | ಆಯ್ಕೆ ಪಟ್ಟಿಯ ಕ್ರಸಂ. | ಅಭ್ಯರ್ಥಿಗಳ ಹೆಸರು (ಶ್ರೀ/ಶ್ರೀಮತಿ) | ಆಯ್ಕೆಯಾಗಿರುವ ಮೀಸಲಾತಿ ಕೋಟಾ |
|---|---|---|---|
| 1 | 1 | ಮಾರುತಿ ಹೆಚ್.<br>NO.44, 4TH CROSS, 1ST BLOCK, NEAR BDA COMPLEX, NAGARABHAVI 2ND STAGE, BANGALORE NAGARBHAVI SECOND STAGE BANGALORE-560072 | GM/3A |

ಪ್ರಧಾನ ನಿರ್ದೇಶಕರ ಕಛೇರಿ
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು
23 JAN 2023
ಪ್ರಧಾನ ನಿರ್ದೇಶಕರು

.....2

Bhagyaprakash

24/1/2023

| | | | |
|---|---|---|---|
| 2. | 2 | ಚೇತನ್ ಹೆಚ್.ಕೆ.<br>HEBBALKOPPAL VILLAGE, HEBBAL POST, K R NAGA TALUK HEBBALKOPPAL MYSORE-571602 | GM/3A/RL |
| 3. | 8 | ಪ್ರೀತಿ ಪಟ್ಟಣ<br>W/O UMESH SANAKAL, NO 35C, K.H.D.C. COLONY, BANAHATTI - 587311. JAMAKANDI TALUK, BAGALAKOTE DISTRICT. | GM/2A/W |
| 4. | 10 | ನಂದೀಶ ಹೆಚ್.ಡಿ.<br>D HALASAHALLI GRAMA, DHANAGURU POST, MALAVALLI TALUK, MANDYA DIST.-571475. | GM/3A/RL |
| 5. | 12 | ಅಶ್ವಿನಿ ಮಾನಸಾ ಎ<br>NO 998 SRI LAKSHMI SARASWATHI NILAYA WATER TANK ROAD NEAR HOUSING BOARD SIRAGATE TUMKUR-572106 | GM/CAT1/W |
| 6. | 19 | ಪ್ರಕಾಶ್ ಹಳಕಟ್ಟಿ<br>S/O REVANASIDDAPPA HALAKATTI , LAXMI NAGAR BEHIND KEB OFFICE, DEVAR HIPPARAGI VIJAYAPURA DISTRICT. DEVAR HIPPARAGI BIJAPUR-586115 | GM/3B/RL |
| 7. | 22 | ನವ್ಯಶ್ರೀ ಎಸ್.<br>NO. 72, 4TH MAIN ROAD, 11TH CROSS, BAPUJINAGAR, BANGALORE BANGALORE BANGALORE-560026 | 2A/W |
| 8. | 24 | ಮುರಳೀಧರಸ್ವಾಮಿ ಸಿ<br>s/O CHIKKAPAPAIAH E, KATAMNALLURU, VIRGONAGAR POST, BIDARAHALLI, BANGALORE KATAMNALLURU BANGALORE-560049 | GM/3A/RL |

.....3

| | | | |
|---|---|---|---|
| 9. | **34** | ನಾಗೇಶ್ ವಿ.<br>S/O VENKATAPPA A, DOOR NO.313, JANATHA COLONY, MAYASANDRA VILLAGE &POST ATTIBELE HOBALI, ANEKAL TALUK, BANGALORE URBAN DISTRICT- 562107. | 2A |
| 10. | **38** | ನಾಜಿಯಾ ಇಕ್ಬಾಲ್ ಪಟ್ವೇಗಾರ್<br>PLOT NO 303, IV CROSS, KIADB, AUTONAGAR, BELAGAVI - 590016<br>BELAGAVI<br>BELGAUM-590001 | 2B/W |
| 11. | **43** | ಮಹೇಂದ್ರ<br>S/O BASAVASHETTY MALEYURU CHAMARAJANAGAR-571128 | C1/RL |
| 12. | **48** | ಪ್ರೀತಂ ಕುಮಾರ್<br>LAXMANASA PAWAR HOUSE NO-6161/A VIDYARANNYA ROAD HOSPET CHOWK ANNYA ROAD HOSPET CHOWK BETGERI-GADAG BETGERI<br>GADAG-582102 | 2A/XMP |

<u>ನೇಮಕಾತಿ ಷರತ್ತು ಮತ್ತು ನಿಬಂಧನೆಗಳು</u>

1. ಮೇಲ್ಕಂಡ ಅಭ್ಯರ್ಥಿಗಳು ರೂ.52650–97100/–ರ ವೇತನ ಶ್ರೇಣಿಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸಹಾಯಕ ನಿಯಂತ್ರಕರು/ಉಪ ನಿರ್ದೇಶಕರು ಹುದ್ದೆಗೆ ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ–3 ರನ್ವಯ ಪರಿವೀಕ್ಷಣೆ (On Probation) ಮೇಲೆ ನೇಮಕ ಮಾಡಲಾಗಿದೆ.
2. ಮೇಲ್ಕಂಡ ನೇಮಕಾತಿಯು ತಾತ್ಕಾಲಿಕವಾಗಿದ್ದು, ಎಲ್ಲಾ ಅಭ್ಯರ್ಥಿಗಳು ಎರಡು ವರ್ಷಗಳ ಅವಧಿಯಲ್ಲಿ ಪರೀಕ್ಷಾರ್ಥ ತರಬೇತಿಯಲ್ಲಿರುತ್ತಾರೆ. ಈ ಅವಧಿಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಸೇವೆ ಮತ್ತು ಕನ್ನಡ ಭಾಷೆ ಪರೀಕ್ಷೆಗಳು) ನಿಯಮಗಳು 1974 ರ ನಿಯಮಾವಳಿಯಲ್ಲಿ ಹುದ್ದೆಗೆ ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು ಮತ್ತು ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ಮತ್ತು ತದನಂತರ ಮಾಡಲಾಗಿರುವ ತಿದ್ದುಪಡಿಗಳನ್ವಯ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತೀರ್ಣರಾಗಬೇಕು ಹಾಗೂ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಬೇಕು.

…..4

Shrayapule

3. ಅಭ್ಯರ್ಥಿಗಳ ನೇಮಕಾತಿಯು ಮತ್ತು ಸೇವಾ ಸೌಲಭ್ಯಗಳು ಆಗಿಂದಾಗ್ಗೆ ಜಾರಿಯಲ್ಲಿರುವ ಸರ್ಕಾರದ ನಿಯಮಗಳು / ಆದೇಶಗಳ ಅಧೀನಕ್ಕೆ ಒಳಪಟ್ಟಿರುತ್ತದೆ.
4. ದಿನಾಂಕ: 01.04.2006ರ ನಂತರ ಸಿವಿಲ್ ಸೇವೆಗೆ ನೇಮಕ ಹೊಂದುವವರಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ. (ಎಸ್.ಪಿ.ಎಲ್) 04 ಪಿಇಟಿ 2005, ದಿ: 31.05.2006ರಲ್ಲಿ ನೂತನ ಪಿಂಚಣಿ ಯೋಜನೆ (NPS) ಅನ್ವಯವಾಗುತ್ತದೆ.
5. ಈ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗುವ ಸಂಬಂಧ ಯಾವುದೇ ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.
6. ಈಗಾಗಲೇ ಸೇವೆಯಲ್ಲಿದ್ದು, ಅರ್ಜಿ ಸಲ್ಲಿಸಿರುವಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ ಹಾಗೂ ಈ ರೀತಿ ಅರ್ಜಿ ಸಲ್ಲಿಸುವಾಗ ನಿಯಮಾವಳಿಗಳನ್ನು ಉಲ್ಲಂಘಿಸಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
7. ಈ ಅಭ್ಯರ್ಥಿಗಳು ಸೇವಾ ಪ್ರತಿಜ್ಞಾವಿಧಿ ಸ್ವೀಕರಿಸತಕ್ಕದ್ದು ಮತ್ತು ಬಹುಪತ್ನಿತ್ವವನ್ನು / ಪತಿತ್ವವನ್ನು ಹೊಂದಿಲ್ಲದಿರುವ ಬಗ್ಗೆ ಸ್ವಯಂ ಘೋಷಣೆ ಮಾಡತಕ್ಕದ್ದು.
8. ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆ ಭಾವ ಚಿತ್ರಗಳು ಮತ್ತು ವಿವಾಹಿತರಾಗಿದ್ದಲ್ಲಿ ಪತಿ ಪತ್ನಿಯ ಜಂಟಿ ಭಾವ ಚಿತ್ರವನ್ನು (ಸ್ಟುಡಿಯೋದಲ್ಲಿ ತೆಗೆಸಿರುವ) ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.
9. ಈ ಅಭ್ಯರ್ಥಿಗಳು ನೀಡಿರುವ / ನೀಡುವ ಯಾವುದೇ ಮಾಹಿತಿಯು ಯಾವುದೇ ಸಮಯದಲ್ಲಿ ತಪ್ಪು ಎಂದು ಕಂಡುಬಂದಲ್ಲಿ ನಿಯಮಾನುಸಾರ ತಕ್ಷಣದಿಂದಲೇ ಅಂತಹವರನ್ನು ಸೇವೆಯಿಂದ ತೆಗೆದು ಹಾಕಲು ಕ್ರಮ ಕೈಗೊಳ್ಳಲಾಗುವುದು.
10. ಈ ಅಧಿಸೂಚನೆಯನ್ವಯ ಅಭ್ಯರ್ಥಿಗಳು ಅಧಿಸೂಚನೆಯನ್ನು ನೊಂದಾಯಿತ ಅಂಚೆ ಮೂಲಕ ಹೊರಡಿಸಿದ ದಿನಾಂಕದಿಂದ 15 ದಿನದೊಳಗಾಗಿ, ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು ಇವರಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಈ ಅವಧಿಯ ಒಳಗೆ ಯಾವುದೇ ಅಭ್ಯರ್ಥಿಯು ಹಾಜರಾಗದಿದ್ದಲ್ಲಿ ಅವರ ನೇಮಕಾತಿಯು ರದ್ದುಗೊಳ್ಳುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ನೇತ್ರಪ್ರಭಾ ಎಂ.ಧಾಯಪುಲೆ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು).

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು –ಇ–ಗೆಜೆಟ್ ನಲ್ಲಿ ಪ್ರಕಟಿಸಲು ಕೋರಿದೆ.

**ಇವರಿಗೆ:**

1. ಮಹಾಲೇಖಪಾಲರು (ಎ ಮತ್ತು ಯು)(ಎ ಮತ್ತು ಇ), 1,2 ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
3. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು (ಪತ್ರದೊಂದಿಗೆ).

……..5

4. ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ, ಬೆಂಗಳೂರು.
5. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು/ ಕೆ.ಪಿ.ಎಸ್.ಸಿ ಕೋಶ) ವಿಧಾನಸೌಧ, ಬೆಂಗಳೂರು (ಪತ್ರದೊಂದಿಗೆ).
7. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸಂಬಂಧಪಟ್ಟ ಅಭ್ಯರ್ಥಿಗಳಿಗೆ (ನೋಂದಣಿ ಅಂಚೆ ಸ್ವೀಕೃತಿಯೊಂದಿಗೆ)

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿ (ಆ ಮತ್ತು ಸಂ) ಆರ್ಥಿಕ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆರ್ಥಿಕ ಇಲಾಖೆ, ವಿದಾನ ಸೌಧ, ಬೆಂಗಳೂರು
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.